ದಿನಾಂಕ.27-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲು :** ಆರೋಪಿ ಪರ ಶ್ರೀ ವಿ.ವಿ.ಎಸ್ ವಕೀಲರಿಂದಃ

**8**. ಪಿರ್ಯಾದಿ ಸಂಸ್ಥೆಯ ಒಟ್ಟು 6 ಶಾಖೆಗಳು ಪ್ರಧಾನ ಕಚೇರಿ ಬಿಟ್ಟು ಇವೆ. ಪ್ರಧಾನ ಕಚೇರಿ ಅಂಕೋಲಾದ ಅಲಗೇರಿ ಯಲ್ಲಿದೆ. ಪ್ರತಿಯೊಂದು ಶಾಖೆಯ ಸಾಲದ ದಾಖಲಾತಿಗಳನ್ನು ಬೇರೆ ಬೇರೆ ಯಾಗಿ ನಿರ್ವಹಿಸುತ್ತೇವೆ ಎಂದರೆ ಸಾಕ್ಷಿ ಎಲ್ಲಾ ಶಾಖೆಗೆ ದಾಖಲೆಗಳು ಒಂದೇ ರೀತಿ ಇರುತ್ತವೆ ಎಂದು ನುಡಿಯುತ್ತಾರೆ. ಪ್ರತಿಯೊಂದು ಶಾಖೆಗಳಲ್ಲಿ ಆ ಶಾಖೆಗೆ ಸಂಬಂಧಪಟ್ಟಂತೆ ಶಾಖಾಧಿಕಾರಿ, ಗುಮಾಸ್ತ ಮುಂತಾದವರು ಇರುತ್ತಾರೆ. ಬೇರೆ ಬೇರೆ ಶಾಖೆಯ ದಾಖಲೆಗಳು ಎಂದು ಆ ದಾಖಲೆಗಳಲ್ಲಿ ಬ್ರಾಂಚ್ ಹೆಸರು ನಮೂದು ಮಾಡಿರುವುದರಿಂದ ಗೊತ್ತಾಗುತ್ತದೆ. ಸಾಲದ ಅರ್ಜಿ, ಡಿಮಾಂಡ್ ಪ್ರಾಮಿಸರಿ ನೋಟು, ಸಾಲದ ಲೆಜ್ಜರ್ ನಲ್ಲಿ ಆ ರೀತಿ ಬ್ರಾಂಚ್ ಹೆಸರನ್ನು ನಮೂದು ಮಾಡಲಾಗುತ್ತದೆ. ನಾನು 7-8 ವರ್ಷಗಳಿಂದ ಪಿರ್ಯಾದಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸಂಸ್ಥೆಯ ಬೈಲಾ ವನ್ನು ನೋಡಿದ್ದೇನೆ. ನನ್ನನ್ನು ಪ್ರಧಾನ ಕಚೇರಿಗೆ ಸಾಲ ವಸೂಲಾತಿ ಅಧಿಕಾರಿ ಎಂದು ನೇಮಿಸಿದರು. ನನಗೆ ಎಲ್ಲಾ ಶಾಖೆಗಳ ವಸುಲಾತಿ ಬಗ್ಗೆ ಅಧಿಕಾರ ಕೊಟ್ಟಿದ್ದಾರೆ. ಸಾಲ ವಸೂಲಾತಿ ಕೆಲಸ ಹೊರತು ಪಡಿಸಿ ಕಚೇರಿಯಲ್ಲಿ ಕೆಲಸ ಮಾಡುತ್ತೇನೆ. ವಸೂಲಾತಿ ಕೆಲಸ ಬಿಟ್ಟು ಬೇರೆ ಯಾವುದೇ ವ್ಯಾಪಾರ ಹಾಗೂ ವ್ಯವಹಾರ ನಾನು ಮಾಡುತ್ತಿಲ್ಲ.

**9**. ಈ ಕೇಸ್ ನಲ್ಲಿ ನಾನು ಹೇಳುವಂತಹ ಸಾಲ ವ್ಯವಹಾರಕ್ಕಾಗಿ ಕೊಡಲಾಗಿದೆ. ಏನು ವ್ಯವಹಾರ ಎಂದರೆ ಸಾಕ್ಷಿ ವ್ಯವಹಾರ ಎಂದು ನುಡಿಯುತ್ತಾರೆ. ಕಾನೂನು ಬದ್ಧ ವ್ಯವಹಾರ ಮಾಡಲು ಕಾನೂನು ಬದ್ಧ ಪ್ರಾಧಿಕಾರದಿಂದ ಅನುಮತಿ ಪಡೆಯಬೇಕು ಎಂದರೆ ಸರಿ. ಆರೋಪಿ ವ್ಯವಹಾರ ಮಾಡಲು ಅನುಮತಿ ಪಡೆದಿದ್ದಾರಾ ಎಂದು ಪರಿಶೀಲನೆ ಮಾಡಿಲ್ಲ. ಆರೋಪಿ ನಮ್ಮ ಸಂಸ್ಥೆಯಲ್ಲಿ ನಾನು ಹೇಳುವಂತಹ ಈ ವ್ಯವಹಾರ ಬಿಟ್ಟು ಬೇರೆ ವ್ಯವಹಾರ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ವಿರುದ್ಧ ನಮ್ಮ

ಸಂಸ್ಥೆಯಿಂದ ಒಟ್ಟು 2 ಇಂತಹ ಪ್ರಕರಣಗಳು ಇವೆ. ಆ 2 ಪ್ರಕರಣಗಳ ಸಂಪೂರ್ಣ ಮಾಹಿತಿ ನನಗೆ ಇದೆ. ಸಾಲ ಪಡೆಯುವ ಮುಂಚೆ ಆರೋಪಿ ಯಾವುದೊ ವ್ಯಾಪಾರ ಮಾಡುತ್ತಿದ್ದರು. ಆತನಿಗೆ ಆದಾಯ ಇದೆಯಾ ಎಂದು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಅವರಿಗೆ ಮನೆ ಇದೆ ಎಂದು ನುಡಿಯುತ್ತಾರೆ. ಆರೋಪಿಯ ಹೆಸರಿಗೆ ಇರುವ ಮನೆಯನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಅವರು ಅಲ್ಲೆ ಮನೆಯಲ್ಲಿ ಉಳಿಯುವುದನ್ನು ನೋಡಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿ ಉಳಿಯುತ್ತಿದ್ದಾರೆ ಎಂದು ಹೇಳುವ ಮನೆಯ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿಲ್ಲ.

10. ಸಾಲದ ಭದ್ರತೆಗಾಗಿ ಜಾಮೀನು ಹಾಗೂ ಇನ್ಸೂರೆನ್ಸ್ ಬಾಂಡ್ ಪಡೆದಿದ್ದೇವೆ. ಇನ್ಸೂರೆನ್ಸ್ ಬಾಂಡ್ ಮಂಗಲಾ ಎಂಬುವವರ ಹೆಸರಿನಲ್ಲಿ ಇರುವಂತಹದ್ದು. ಯಾವ ಸ್ವರೂಪದ ಇನ್ಸೂರೆನ್ಸ್ ಬಾಂಡ್ ಎಂದು ನನಗೆ ನೆನಪಿಲ್ಲ. ಅದರ ಪ್ರಿಮಿಯಮ್ ವನ್ನು ಯಾರು ತುಂಬುತ್ತಿದ್ದರು ಎಂದು ಗೊತ್ತಿಲ್ಲ. ಸಾಕ್ಷಿ ಸ್ವತಃ ಅದು ಲ್ಯಾಪ್ಸ್ ಆಗಿದೆ ಎಂದು ನುಡಿಯುತ್ತಾರೆ. ಆ LIC ಬಾಂಡ್ ನ್ನು ಕಾನೂನು ಬದ್ದ ವಾಗಿ assign ಮಾಡಲಾಗಿದೆ. ಆ ರೀತಿ LIC ಬಾಂಡ್ ಕಾನೂನು ಬದ್ಧ ವಾಗಿ ನಮ್ಮ ಸಂಸ್ಥೆಗೆ assign ಅದಾಗ ಅದರ ಪ್ರಿಮಿಯಮ್ ತುಂಬುವುದು ನಮ್ಮ ಜವಾಬ್ದಾರಿ ಎಂದರೆ ಸಾಕ್ಷಿ ನಾವು ತುಂಬುವುದಿಲ್ಲ ಎಂದು ನುಡಿಯುತ್ತಾರೆ. LIC ಬಾಂಡ್ money back ಸ್ವರೂಪದ್ದಾಗಿದ್ದರೆ ಆ ರೀತಿ money back ಮೊತ್ತ ಬಂದರೆ ನಾವೆ ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಪ್ರಿಮಿಯಮ್ ನಾವು ತುಂಬಿಲ್ಲ. Money back ಮೊತ್ತ ಪಡೆದಿದ್ದೇವಾ ಎಂದು ನನಗೆ ನೆನಪಿಲ್ಲ. ಆ ಇನ್ಸೂರೆನ್ಸ್ ಬಾಂಡ್ ಯಾವ ದಿನಾಂಕದಂದು ಮಾಡಿಸಿದ್ದು ಎಂದು ನೆನಪಿಲ್ಲ. ಅದರ ಪಾಲಿಸಿ ನಂಬರ್ ನನಗೆ ಹೇಳಲಾಗುವುದಿಲ್ಲ. ಸಾಲದ ದಾಖಲೆಯಲ್ಲಿ ಇನ್ಸೂರೆನ್ಸ್ ಬಾಂಡ್ ನಂಬರ್ ಮತ್ತು ದಿನಾಂಕ ನಮೂದಿಸಿಲ್ಲ. ಅದರ ಬಾಂಡ್ ಈಗ ನಮ್ಮಲ್ಲಿ ಇದೆ. ಅದನ್ನು ಹಾಜರು ಪಡಿಸಲು ನ್ಯಾಯಲಾಯದಿಂದ ನಿರ್ದೇಶನ ಆದರೆ ನನಗೆ ಹಾಜರು ಪಡಿಸಲು ಸಮಸ್ಯೆ ಇಲ್ಲ ಎಂದರೆ ಸರಿ.

11. ಆರೋಪಿ ಸಾಲ ಬೇಕು ಎಂದು ಮಾರ್ಚ್ 2017 ರಲ್ಲಿ ಬಂದಿರುತ್ತಾರೆ. ದಿನಾಂಕ ನೆನಪಿಲ್ಲ. ಇನ್ನೊಂದು ಪ್ರಕರಣದಲ್ಲಿ ಆರೋಪಿ ಸಾಲ ಬೇಕು ಎಂದು ಮಾರ್ಚ್ ತಿಂಗಳಲ್ಲಿ ಬಂದಿರಬಹುದು. ಸಾಲ ಅರ್ಜಿ ಸಲ್ಲಿಸಿದ

ಮೇಲೆ ಎಷ್ಟು ದಿನದಲ್ಲಿ ಸಾಲ ಮಂಜೂರು ಆಯಿತು ಎಂದು ನೆನಪಿಲ್ಲ. 2 ಸಾಲಗಳು ಒಂದೇ ದಿವಸ ಮಂಜೂರಾಗಿದೆ. ಸಾಲ ಮಂಜೂರಾತಿಗೆ ನಮ್ಮ ಸಂಸ್ಥೆಯಲ್ಲಿ ಆಡಳಿತ ಮಂಡಳಿಯ ಸಭೆಯಲ್ಲಿ ಸಾಲ ಕೊಡಬೇಕಾ ಬೇಡವಾ ಎಂದು ನಿರ್ಣಯ ತೆಗೆದುಕೊಳ್ಳುವ ಕ್ರಮ ವಹಿಸುತ್ತಾರೆ. ಈ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಆಡಳಿತ ಮಂಡಳಿಯ ಸಭೆ ಯಾವ ದಿನಾಂಕದಂದು ಆಯಿತು ಎಂದು ನೆನಪಿಲ್ಲ. ಆ ಸಭೆಯ ಬಾಬ್ತು ದಾಖಲೆಯನ್ನು ನೋಡಿದ್ದೇನೆ. ಅದರ ದಾಖಲೆ ಪ್ರಧಾನ ಕಚೇರಿಯಲ್ಲಿ ಇದೆ. ಆ ದಾಖಲೆಯ ನಕಲನ್ನು ಹಾಜರು ಪಡಿಸಲು ನನಗೆ ಸಮಸ್ಯೆ ಇಲ್ಲ ಎಂದರೆ ಸರಿ.

**12**. ಆರೋಪಿ ರೂ. 1,00,000/- ಸಾಲಕ್ಕೆ ಅರ್ಜಿ ಕೊಟ್ಟದ್ದು. ರೂ. 73,900/- ಸಾಲ ಮಂಜೂರಾಯಿತು. ಆ ಮಂಜೂರಾದ ಸಾಲವನ್ನು ಇರುವ ಉಳಿತಾಯ ಖಾತೆಗೆ ಜಮೆ ಮಾಡಿದ್ದೇವೆ. ಅವರ ಉಳಿತಾಯ ಖಾತೆಯ ನಂಬರ್ ನೆನಪಿಲ್ಲ. ಆ ಸಾಲದ ಮೊತ್ತವನ್ನು ಅವರ ಉಳಿತಾಯ ಖಾತೆಗೆ ವರ್ಗಾಯಿಸುವ ಮೂಲಕ ಜಮೆ ಮಾಡಿದ್ದೇವೆ. ಆತನ ಸಾಲದ ಖಾತೆಯಿಂದ ಆತನ ಉಳಿತಾಯ ಖಾತೆಗೆ ಸಾಲದ ಮೊತ್ತ ವರ್ಗಾಯಿಸಿರುವುದು. ಆತನ ಸಾಲದ ಖಾತೆಗೆ ನಮ್ಮ ಸಂಸ್ಥೆಯ ಉಳಿತಾಯ ಖಾತೆಯಿಂದ ಜಮೆಯಾಗಿದೆ. ನಮ್ಮ ಸಂಸ್ಥೆಯ ಉಳಿತಾಯ ಖಾತೆ ಕೆ.ಡಿ.ಸಿ.ಸಿ ಬ್ಯಾಂಕ್ ನಲ್ಲಿ ಇದೆ. ಆರೋಪಿ ಆತನ ಉಳಿತಾಯ ಖಾತೆಯಿಂದ ಆ ಸಾಲದ ಹಣವನ್ನು ವಿತ್ ಡ್ರಾವಲ್ ಮೂಲಕ ಪಡೆದುಕೊಂಡರು. ಅದರ ವಿತ್ ಡ್ರಾವಲ್ ಸ್ಲಿಪ್ ನಮ್ಮ ಬಳಿ ಇರುತ್ತದೆ ಎಂದರೆ ಸರಿ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಸಮಸ್ಯೆ ಇಲ್ಲ ಎಂದರೆ ಸರಿ. ನಿಪಿ-8 ರಲ್ಲಿ ಆರೋಪಿಯ ಉಳಿತಾಯ ಖಾತೆಗೆ ಜಮೆ ಮಾಡಲಾಗಿದೆ ಎಂದು ನಮೂದು ಇಲ್ಲ ಎಂದರೆ ಸರಿ. ಉಳಿತಾಯ ಖಾತೆ ತೆರೆಯಲು ನಮ್ಮ ಸಂಸ್ಥೆಯಲ್ಲಿ ಕನಿಷ್ಟ ರೂ. 100/- ಬ್ಯಾಲೆನ್ಸ್ ಇರಬೇಕು. ಆರೋಪಿಯ ಉಳಿತಾಯ ಖಾತೆ ಎಂದು ನಾನು ಹೇಳಿದ ಖಾತೆಯ ದಾಖಲೆಗಳು ನಮ್ಮ ಸಂಸ್ಥೆಯಲ್ಲಿ ಇದೆ ಎಂದರೆ ಸರಿ.

**13**. ನಿಪಿ-1 ರಲ್ಲಿ ಚೆಕ್ ಬರೆದಿದ್ದಾನೆ ಎಂದು ಹೇಳುವ ದಿನಾಂಕಕ್ಕೆ ನಿಪಿ-8 ರಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿ ಬಾಕಿ ಇರುವ ಮೊತ್ತವನ್ನು ಮಾತ್ರ ಲೆಜ್ಜರ್ ನಲ್ಲಿ ಬರೆಯುತ್ತೇವೆ ಎಂದು ನುಡಿಯುತ್ತಾರೆ. ಚೆಕ್ಕನ್ನು ಬರೆದಿದ್ದಾರೆ ಎಂದು ಹೇಳುವ ದಿನಾಂಕ ಕ್ಕೆ ಅಷ್ಟು ಬಾಕಿ ಇತ್ತು ಎಂದು ತೋರಿಸುವ ಬಹಳಷ್ಟು ದಾಖಲೆಗಳು

ನಮ್ಮ ಸಂಸ್ಥೆಯಲ್ಲಿ ಇರುತ್ತದೆ ಎಂದರೆ ಸಾಕ್ಷಿ ಲೆಜ್ಜರ್ ಮಾತ್ರ ಇರುವುದು ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಹಾಗೂ ಸಿಸಿ ನಂ 81/2024 ರಲ್ಲಿ ನೋಟಿಸು ನೀಡಲು ಹಾಗೂ ಪ್ರಕರಣ ದಾಖಲಿಸಲು ನಾನೆ ವಕೀಲರಿಗೆ ಮಾಹಿತಿ ಹಾಗೂ ದಾಖಲಾತಿಗಳನ್ನು ನೀಡಿರುತ್ತೇನೆ. ದಾಖಲಾತಿಗಳನ್ನು ನೀಡುವಾಗ ಅವುಗಳನ್ನು ಪರಿಶೀಲನೆ ಮಾಡಿಯೇ ನೀಡಿದ್ದೇನೆ ಎಂದರೆ ಸರಿ. ಎಲ್ಲಾ ದಾಖಲಾತಿಗಳನ್ನು ನಿಶಾನೆಯಾಗಿ ಗುರುತಿಸುವಾಗ ಅವುಗಳನ್ನು ತಿಳಿದುಕೊಂಡು ನಿಶಾನೆಯಾಗಿ ಗುರುತಿಸಿದ್ದೇನೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಯಾವುದಾದರೂ ದಾಖಲೆ ನಿಶಾನೆಯಾಗಲು ಬಾಕಿ ಇದೆಯಾ ಎಂದು ನನಗೆ ಕಂಡು ಬಂದಿಲ್ಲ.

**ಮುಂದುವರೆದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.